KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ವಿಧಾನಸಭಾ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಶ್ವವಾಣಿ ದಿನಾಂಕ : DATE : 11/07/2019

# ಶಾಸಕರಿಗೆ ನೀಡುತ್ತಿದ್ದ ನೀತಿಪಾಠ ಏನಾಯಿತು?

**ಬೆಂಗಳೂರು:** ವಿಧಾನಸಭಾ ಸಭಾಧ್ಯಕ್ಷ ಎನ್ನುವ ಸಾಂವಿಧಾನಿಕ ಹುದ್ದೆಯಲ್ಲಿರುವವರು, ಪಕ್ಷ, ಸೈದ್ಧಾಂತಿಕ ಭಿನ್ನಾಭಿಪ್ರಾಯದ ಎಲ್ಲೆ ಮೀರಬೇಕು. ಅದರಲ್ಲಿಯೂ ರಮೇಶ್ [illegible] ಈ ನಿರೀಕ್ಷೆಗಳು ಮತ್ತಷ್ಟು ಹೆಚ್ಚಾಗಿವೆ. ಆದರೆ ರಾಜೀನಾಮೆ ವಿಷಯದಲ್ಲಿ ಸ್ಪೀಕರ್ ನಡೆದುಕೊಂಡ ರೀತಿ, ಇದಕ್ಕೆಲ್ಲ ವಿರುದ್ಧವಾಗಿದೆಯೇ ಎನ್ನುವ ಅನುಮಾನಗಳನ್ನು ಹುಟ್ಟಿಸಿವೆ.



ಹೌದು, ಮೈತ್ರಿ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಸಭಾಧ್ಯಕ್ಷರಾಗಿ ರಮೇಶ್ ಕುಮಾರ್ ಅವಿರೋಧವಾಗಿ ಆಯ್ಕೆಯಾಗುತ್ತಿದ್ದಂತೆ, ಅನೇಕರು ಇನ್ನು ಮುಂದೆ ಕಲಾಪಗಳು ಹಾಗೂ ವಿಧಾನಸಭಾ ನಡವಳಿಗಳು ಕ್ರಮಬದ್ಧವಾಗಿ ನಡೆಯುತ್ತವೆ ಎಂದೇ ಭಾವಿಸಿದ್ದರು. ಈ ಮಾತುಗಳನ್ನು ಹಲವು ಬಾರಿ ಸ್ಪೀಕರ್ ರಮೇಶ್ ಕುಮಾರ್ ಹೇಳಿದ್ದರು. ಆದರೆ, ಶಾಸಕರ ರಾಜೀ ನಾಮೆ ಅಂಗೀಕರಿಸುವ ವಿಚಾರದಲ್ಲಿ 'ಕಾದು ನೋಡುವ ತಂತ್ರ' ಅನುಸರಿಸುವ ಮೂಲಕ ಮೈತ್ರಿ ಸರಕಾರಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ ಎನ್ನುವ ಆರೋಪ ಕೇಳಿಬಂದಿದೆ.

➔ 4

# ಶಾಸಕರಿಗೆ ನೀಡುತ್ತಿದ್ದ ನೀತಿಪಾಠ ಏನಾಯಿತು?

← ಮೊದಲಪುಟದಿಂದ

ರಾಜೀನಾಮೆ ಸಲ್ಲಿಸಿದ 14 ಶಾಸಕರ ಪತ್ರವನ್ನು ಮಂಗಳವಾರ ಪರಿಶೀಲಿಸಿರುವ ಸ್ಪೀಕರ್, ಇದರಲ್ಲಿ ಕೇವಲ ಐದು ರಾಜೀನಾಮೆ ಪತ್ರಗಳು ಮಾತ್ರ ಕ್ರಮಬದ್ಧ ಎಂದಿದ್ದಾರೆ. ಕ್ರಮಬದ್ಧವಾಗಿರುವ ಈ ರಾಜೀನಾಮೆ ಪತ್ರಗಳನ್ನು ಅಂಗೀಕರಿಸದೇ, ಮತ್ತೊಂದು ವಾರ ಮುಂದೂಡುವ ಮೂಲಕ ತಮ್ಮ ಪಕ್ಷಕ್ಕೆ ಅನುಕೂಲ ಮಾಡಿಕೊಟಿರುವುದು ಸ್ಪಷ್ಟವಾಗಿದೆ. ಕ್ರಮಬದ್ಧವಾಗಿರುವ ಐದು ಶಾಸಕರನ್ನು ವಿಚಾರಣೆಗೆ ಒಳಪಡಿಸಬೇಕಾದರೂ, ಒಂದು ದಿನದ ಅಂತರದಲ್ಲಿ ವಿಚಾರಣೆ ನಡೆಸಬಹುದಾಗಿತ್ತು. ಆದರೆ, ಈ ಕ್ರಮ ಕೈಗೊಳ್ಳದೇ, ಸದನ ಆರಂಭವಾಗುವ ದಿನವೇ ವಿಚಾರಣೆ ನಡೆಸುವುದಾಗಿ ಹೇಳುವ ಹಾಗೂ ಇನ್ನೊಂದು ಗುಂಪಿನ ಶಾಸಕರನ್ನು 18ಕ್ಕೆ ವಿಚಾರಣೆ ನಡೆಸುವುದಾಗಿ ಹೇಳುವ ಔಚಿತ್ಯವೇನಿತ್ತು ಎನ್ನುವ ಪ್ರಶ್ನೆ ಇದೀಗ ಎದ್ದಿದೆ.

**ಸದನದಲ್ಲಿ ಹೇಳಿದ್ದ ನೀತಿಪಾಠ ಏನಾಯಿತು?** ಮೈತ್ರಿ ಸರಕಾರ ಅಸ್ತಿತ್ವಕ್ಕೆ ಬಂದಾಗ ಅವಿರೋಧವಾಗಿ ಆಯ್ಕೆಯಾಗಿದ್ದ ರಮೇಶ್ ಕುಮಾರ್ ಅವರು ಈ ಹಿಂದೆಯೂ ಒಮ್ಮೆ ಸಭಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಎರಡು ಅವಧಿಯಲ್ಲಿಯೂ ಕಲಾಪದ ವೇಳೆ ಶಾಸಕರಿಗೆ, 'ನೀತಿಪಾಠ' ಹೇಳುವುದರೊಂದಿಗೆ, ವೈಯಕ್ತಿಕ ಹಾಗೂ ಪಕ್ಷದ ಹಿತಾಸಕ್ತಿಗಿಂತ ರಾಜ್ಯದ ಜನರ ಹಿತಾಸಕ್ತಿಯೇ ಮುಖ್ಯ ಎನ್ನುವ ಮಾತನ್ನು ಹೇಳುತ್ತಿದ್ದರು. ಆದರೀಗ ರಾಜ್ಯದ ಜನ ಬರದಿಂದ ನರಳುತ್ತಿದ್ದು, ಈ ವೇಳೆ ಸರಕಾರ ಅತಂತ್ರದಲ್ಲಿದೆ. ಇದು ಸರಿಹೋಗಲು ರಾಜೀನಾಮೆ ಪ್ರಹಸನವೊಂದು ತಾತ್ವಿಕ ಅಂತ್ಯ ಕಾಣಬೇಕು. ಆದರೆ ಅದನ್ನು ಮಾಡದೇ, ಮೈತ್ರಿ ಪಕ್ಷಕ್ಕೆ ತಮ್ಮ ಶಾಸಕರನ್ನು ವಾಪಸು ಕರೆಸಿಕೊಳ್ಳಲು ಬೇಕಿರುವ ಸಮಯ ನೀಡಿರುವುದು ಎಷ್ಟು ಸರಿ ಎನ್ನುವುದು ಸಾರ್ವಜನಿಕ ವಲಯದಲ್ಲಿ ಕೇಳಿಬಂದಿದೆ.

- ಕ್ರಮಬದ್ಧವಾಗಿದ್ದರೂ ರಾಜೀನಾಮೆ ಅಂಗೀಕರಿಸಲು ಏಕೆ ತಡ?
- ಜನರ ಸಮಸ್ಯೆ, ಸಂವಿಧಾನವೇ ಎಲ್ಲಕ್ಕಿಂತ ಮುಖ್ಯ ಎನ್ನುವ ಸಭಾಧ್ಯಕ್ಷರು ಏಕೆ ರೀತಿ ಮಾಡುತ್ತಿದ್ದಾರೆ?
- ಯಾರಿಗೂ ಮಣಿಯುವುದಿಲ್ಲವೆಂದು ಸರಕಾರಕ್ಕೆ ಅನುಕೂಲ ಮಾಡಿಕೊಟ್ಟ ಆರೋಪ

## ಪಕ್ಷಕ್ಕೆ ಅನುಕೂಲ

ಸಭಾಧ್ಯಕ್ಷ ಸ್ಥಾನವೆಂದರೇ ಪಕ್ಷಾತೀತ. ಆದ್ದರಿಂದ ನಾನು ಯಾವುದೇ ಪಕ್ಷಕ್ಕೆ ಸೀಮಿತವಲ್ಲ. ಆಡಳಿತಕ್ಕಿಂತ ವಿರೋಧ ಪಕ್ಷಕ್ಕೆ ನನ್ನ ಬೆಂಬಲವೆಂದು ಹಲವು ಬಾರಿ ಸದನದಲ್ಲಿ ಹೇಳಿರುವ ಸ್ಪೀಕರ್ ರಮೇಶ್ ಕುಮಾರ್, ರಾಜೀನಾಮೆ ಅಂಗೀಕರಿಸುವ ವಿಚಾರದಲ್ಲಿ ಮಾತ್ರ ಇದಕ್ಕೆ ತದ್ವಿರುದ್ಧ ಎನ್ನುವ ರೀತಿ ನಡೆದುಕೊಳ್ಳುತ್ತಿರುವುದು ಸುಳ್ಳಲ್ಲ.

ಕಳೆದ ಶನಿವಾರದಿಂದ ಶುರುವಾದ ರಾಜಕೀಯ ಮೇಲಾಟಕ್ಕೆ ಸಾಕ್ಷಿಯಾಗುತ್ತಿರುವ ಸ್ಪೀಕರ್ ಕಚೇರಿಯ ನಡಾವಳಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕಾಂಗ್ರೆಸ್‌ಗೆ ತಮ್ಮ ಅತೃಪ್ತರನ್ನು ವಾಪಸು ಕರೆಸಿಕೊಳ್ಳಲು ಹಾಗೂ ರಾಜೀನಾಮೆ ಹಿಂಪಡೆಯಲು ಅನುಕೂಲಕರ ವಾತಾವರಣ ಸೃಷ್ಟಿಸಿರುವುದಂತು ಸುಳ್ಳಲ್ಲ. ಪ್ರತಿಯೊಬ್ಬ ಶಾಸಕರ ರಾಜೀನಾಮೆ ಸ್ವಪ್ರೇರಿತವಾಗಿ ನೀಡಿದ್ದಾರೆಯೋ ಇಲ್ಲವೋ ಎನ್ನುವುದನ್ನು ಪರಿಶೀಲಿಸುವುದು ಸಭಾಧ್ಯಕ್ಷ ಕರ್ತವ್ಯವಾದರೂ, ಅದನ್ನು ಹೆಚ್ಚು ದಿನಗಳ ಕಾಲ ಎಳೆಯುವಂತಿಲ್ಲ. ಆದರೆ ರಾಜೀನಾಮೆಗೆ ಸಂಬಂಧಿಸಿದಂತೆ ವಿಚಾರಣೆಯನ್ನು ವಾರಗಟ್ಟಲೆ ಮುಂದಾಕಿರುವುದು ಸರಿಯಲ್ಲ ಎನ್ನುವ ವಾದ ಸಾರ್ವಜನಿಕ ವಲಯದಲ್ಲಿ ಕೇಳಿಬಂದಿದೆ.

8